"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

---

# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತಾರನೆಯ ಅಧಿವೇಶನ

18ನೇ ಫೆಬ್ರವರಿ 2022

ಶುಕ್ರವಾರ

## ವಿಷಯಾನುಕ್ರಮಣಿಕೆ (Index)

**01. ಸಂತಾಪ ಸೂಚನೆ**

**ವಿಧಾನ ಪರಿಷತ್ತಿನ ಹಾಗೂ ವಿಧಾನಸಭೆಯ ಮಾಜಿ ಶಾಸಕರಾದ ಶ್ರೀ ಮಳ್ಳೂರ್ ಆನಂದ ರಾವ್‌ರವರ ನಿಧನದ ಬಗ್ಗೆ**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)
- ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು)

**02. ಪ್ರಶ್ನೋತ್ತರ**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**389 – ರೈತರ ಬೆಳೆ ವಿಮೆ ಯೋಜನೆ**

- ಶ್ರೀ ಕೆ.ಎ.ತಿಪ್ಪೇಸ್ವಾಮಿ
- ಶ್ರೀ ಬಿ.ಸಿ.ಪಾಟೀಲ್ (ಕೃಷಿ ಸಚಿವರು)

**ಆ) ಚುಕ್ಕೆ  ಗುರುತಿನ ಹಾಗೂ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಿದ ಉತ್ತರಗಳ ಮಂಡನೆ**

**03. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ**

**"ರಾಷ್ಟ್ರಧ್ವಜಕ್ಕೆ ಸಚಿವರೊಬ್ಬರು ಅಗೌರವ ತೋರಿದ್ದಾರೆನ್ನುವ ಬಗ್ಗೆ"**

- ಶ್ರೀ ಪ್ರಕಾಶ್ ಕೆ. ರಾಥೋಡ್
- ಶ್ರೀ ಸಲೀಂ ಅಹಮದ್
- ಡಾ: ವೈ.ಎ.ನಾರಾಯಣಸ್ವಾಮಿ

**04. ವರದಿಗಳನ್ನೊಪ್ಪಿಸುವುದು**

---

**೦5. ನಿಯಮ 59 ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ**

**"ರಾಷ್ಟ್ರಧ್ವಜಕ್ಕೆ ಸಚಿವರೊಬ್ಬರು ಅಗೌರವ ತೋರಿದ್ದಾರೆನ್ನುವ ಬಗ್ಗೆ"**

– ಶ್ರೀ ಎಂ.ಕೆ.ಪ್ರಾಣೇಶ್

~*~*~*~*~

(076) 18.02.2022 10.20 **ಟಿಸಿಹೆಚ್-ಜಿಆರ್**

**ಕರ್ನಾಟಕ ವಿಧಾನ ಪರಿಷತ್ತು**

**ಶುಕ್ರವಾರ, 18ನೇ ಫೆಬ್ರವರಿ 2022**

**ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಪೂರ್ವಾಹ್ನ 10 ಗಂಟೆ 24 ನಿಮಿಷಕ್ಕೆ ಸಮಾವೇಶಗೊಂಡಿತು**

**ಸಭಾಪತಿಯವರಾದ (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಅವರು ಪೀಠದಲ್ಲಿ**

**ಉಪಸ್ಥಿತರಿದ್ದರು**

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಪಾಯಿಂಟ್ ಆಫ್ ಆರ್ಡರ್.

**ಸಭಾಪತಿಯವರು:–** ಮಾನ್ಯ ಬಿ.ಕೆ.ಹರಿಪ್ರಸಾದ್ ರವರೇ, ಸದನ ಇನ್ನೂ ಶುರುನೇ ಆಗಿಲ್ಲ, ಆಗಲೇ ಪಾಯಿಂಟ್ ಆಫ್ ಆರ್ಡರ್ ಕೇಳುತ್ತಿದ್ದೀರಿ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನನ್ನ ಜೀವಕ್ಕೆ ಬೆದರಿಕೆ ಇದೆ. ಭಾರತೀಯ ಜನತಾ ಪಾರ್ಟಿಯ ಅಧ್ಯಕ್ಷರು . . .

**ಸಭಾಪತಿಯವರು:–** ನೀವು ಒಂದು ಕೆಲಸ ಮಾಡಿ. If you don't mind, ಮೊದಲು ಪ್ರಶ್ನೋತ್ತರ ಅವಧಿ ಮುಗಿಸೋಣ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ಹೇಳಿಬಿಡುತ್ತೇನೆ.

**ಸಭಾಪತಿಯವರು:–** ಈಗ ಬೇಡ ತಪ್ಪಾಗುತ್ತದೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಭಾರತೀಯ ಜನತಾ ಪಾರ್ಟಿಯ ಅಧ್ಯಕ್ಷರು ಹೇಳಿಕೆ ಕೊಟ್ಟಿರುವುದು ಪತ್ರಿಕೆಯಲ್ಲಿ ಬಂದಿರುವುದರಿಂದ ನನ್ನ ಜೀವಕ್ಕೆ ಬೆದರಿಕೆ ಇದೆ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಪ್ಲೀಸ್ ನಿಮಗೆ ಅವಕಾಶ ಕೊಡುತ್ತೇನೆ.

---

೦1. ಸಂತಾಪ ಸೂಚನೆ

**ವಿಷಯ:-** ವಿಧಾನ ಪರಿಷತ್ತಿನ ಹಾಗೂ ವಿಧಾನಸಭೆಯ ಮಾಜಿ ಶಾಸಕರಾದ ಮಳ್ಳೂರ್ ಆನಂದ ರಾವ್ ರವರ ನಿಧನದ ಬಗ್ಗೆ.

-----

**ಸಭಾಪತಿಯವರು:-** ವಿಧಾನ ಪರಿಷತ್ತಿನ ಹಾಗೂ ವಿಧಾನ ಸಭೆಯ **ಮಾಜಿ ಶಾಸಕರಾದ ಮಳ್ಳೂರ್ ಆನಂದ ರಾವ್ ರವರು** ನಿಧನರಾದುದನ್ನು ಈ ಸದನಕ್ಕೆ ತಿಳಿಸಲು ವಿಷಾಧಿಸುತ್ತೇನೆ.

2ನೇ ಅಕ್ಟೋಬರ್, 1935ರಂದು ಶಿಡ್ಲಘಟ್ಟದಲ್ಲಿ ಜನಿಸಿದ್ದ ಶ್ರೀಯುತರು ಎಂ.ಎ, ಬಿ.ಎಡ್. ಪರವೀಧರರಾಗಿದ್ದರು. ವೃತ್ತಿಯಲ್ಲಿ ಕೃಷಿಕರಾಗಿ ಹೈನುಗಾರಿಕೆ ನಡೆಸುತ್ತಿದ್ದರು. ಕರ್ನಾಟಕ ರಾಜ್ಯ ಆಗಮತ್ರಯ ಮಹಾಮಂಡಳ, ಕರ್ನಾಟಕ ಇ.ಎಸ್.ಐ., ಎಂಪ್ಲಾಯಿಸ್ ಅಸೋಸಿಯೇಷನ್, ಕರ್ನಾಟಕ ಶಾಖೆಯ ಆಲ್ ಇಂಡಿಯಾ ಫೆಡರೇಷನ್ ಆಫ್ ಯುನೈಟೆಡ್ ನೇಷನ್ಸ್ ಅಸೋಸಿಯೇಷನ್ಸ್ ಹಾಗೂ ಹೋಟೆಲ್ ವರ್ಕರ್ಸ್ ಅಂಡ್ ಓನರ್ಸ್ ಕಲ್ಯಾಣ ಸಮಿತಿಯ ಅಧ್ಯಕ್ಷರಾಗಿ, ಮೈಸೂರು ಸ್ಟೇಟ್ ಸೆಕೆಂಡರಿ ಟೀಚರ್ಸ್ ಅಸೋಸಿಯೇಷನ್‌ನ ಪ್ರಧಾನ ಕಾರ್ಯದರ್ಶಿಯಾಗಿ, ಅಖಿಲ ಭಾರತ ಸೆಕೆಂಡರಿ ಟೀಚರ್ಸ್ ಫೆಡರೇಷನ್, ದೆಹಲಿ ಹಾಗೂ ಮುಂಬೈ ಭಾರತೀಯ ಶಿಕ್ಷಣ ಮಂಡಳ ಇವುಗಳ ಜಂಟಿ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿದ್ದರು.

ಶ್ರೀಯುತರು 1970 ರಿಂದ 1976 ರವರೆಗೆ ಶಿಕ್ಷಕರ ಕ್ಷೇತ್ರದಿಂದ ಪಕ್ಷೇತರರಾಗಿ ಚುನಾಯಿತರಾಗಿ ವಿಧಾನ ಪರಿಷತ್ತಿನ ಶಾಸಕರಾಗಿ ಹಾಗೂ 1978 ರಲ್ಲಿ ರಾಜಾಜಿನಗರ ವಿಧಾನಸಭಾ ಕ್ಷೇತ್ರದಿಂದ 6ನೇ ವಿಧಾನಸಭೆಯ ಸದಸ್ಯರಾಗಿ ಕಾರ್ಯನಿರ್ವಹಿಸಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಒಬ್ಬರು ಹಿರಿಯ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ವಿಧಾನ ಪರಿಷತ್ತು ಹಾಗೂ ವಿಧಾನಸಭೆ ಈ ಎರಡೂ ಸದನದಿಂದ ಆಯ್ಕೆಯಾಗಿದ್ದ ಮಳ್ಳೂರ್ ಆನಂದ

ರಾವ್ ರವರ ನಿಧನದ ಬಗ್ಗೆ ತಾವು ಸಂತಾಪ ಸೂಚನೆಯನ್ನು ಮಾಡಿದ್ದೀರಿ. ಅದಕ್ಕೆ ನಾನು ಸರ್ಕಾರದ ಪರವಾಗಿ ಹಾಗೂ ಈ ಸದನದ ಪರವಾಗಿ ಸಹಮತವನ್ನು ವ್ಯಕ್ತಪಡಿಸುತ್ತಿದ್ದೇನೆ.

ಮಳ್ಳೂರ್ ಆನಂದ ರಾವ್ ರವರು ಎಂದರೆ ಹೋರಾಟಕ್ಕೆ, ಶ್ರಮಕ್ಕೆ ಮತ್ತು ಸೈದ್ಧಾಂತಿಕ ವಿಚಾರಗಳಿಗೆ ಬದ್ಧರಾಗಿ ಕೆಲಸ ಮಾಡಿದಂಥ ಒಬ್ಬ ಅಪರೂಪದ ಹಿರಿಯ ರಾಜಕಾರಣಿ. ಅವರು 1970-76 ರವರೆಗೆ ಶಿಕ್ಷಕರ ಕ್ಷೇತ್ರದಿಂದ ಪಕ್ಷೇತರರಾಗಿ ಆಯ್ಕೆಯಾದ್ದರು. 1978ರಲ್ಲಿ ಮಾನ್ಯ ಶಾಸಕರಾದ ಎಸ್. ಸುರೇಶ್‌ಕುಮಾರ್‌ರವರ ಪಕ್ಕದ ಕ್ಷೇತ್ರವಾದ ರಾಜಾಜಿನಗರ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಸಾಮಾನ್ಯವಾಗಿ ಅವರು ಕ್ರೀಡಾ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಅತಿ ಹೆಚ್ಚು ಕೆಲಸ ಮಾಡಿದ್ದಾರೆ. ದುಡಿದು ಉಣ್ಣುವ ಜನರ ಬಗ್ಗೆ ಹೆಚ್ಚಿನ ಕಾಳಜಿಯನ್ನು ಹೊಂದಿದ್ದರು. ಹೋಟೆಲ್ ವರ್ಕರ್ಸ್ ಇರಬಹುದು ಅಥವಾ ಶ್ರಮವಹಿಸಿ ದುಡಿಯುವಂತ ಎಲ್ಲಾ ಸಿಬ್ಬಂದಿಗಳ ಮತ್ತು ಕಾರ್ಮಿಕರ ಬಗ್ಗೆ ಕಳಕಳಿಯಿಂದ ಕೆಲಸ ಮಾಡಿದಂಥ ಇತಿಹಾಸ ಹೊಂದಿದ್ದವರು. ಅನೇಕ ಜನ ಪರ ಹೋರಾಟಗಳನ್ನು ಮಾಡಿಕೊಂಡು ಬಂದಿದ್ದರು. ಎಲ್ಲದಕ್ಕಿಂತ ಹೆಚ್ಚಿನದಾಗಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ, ಭಾರತೀಯ ಸಂಘದ ಮೂಲಕ ರಾಜಕಾರಣಕ್ಕೆ ಪ್ರವೇಶ ಮಾಡಿ ಸೈದ್ಧಾಂತಿಕ ರಾಜಕಾರಣದ ನೆಲೆಗಟ್ಟನ್ನು ಅರ್ಥ ಮಾಡಿಕೊಂಡು ರಾಜಕಾರಣ ಇರುವುದು ಒಂದು ವ್ರತ ಎಂದು ಸ್ವೀಕಾರ ಮಾಡಿ ಕೆಲಸ ಮಾಡಿದಂಥ ಕೆಲವರಲ್ಲಿ ನಮ್ಮ ಮಳ್ಳೂರ್ ಆನಂದ ರಾವ್‌ರಂತಹ ಹಿರಿಯ ಚೇತನವನ್ನು ಕಳೆದುಕೊಂಡಿರುವಂಥದ್ದು ಇಡೀ ರಾಜ್ಯಕ್ಕೆ ದುಃಖದಾಯಕವಾದಂಥ ವಿಚಾರವಾಗಿದೆ. ಸೈದ್ಧಾಂತಿಕ ವಿಚಾರಗಳ ಪ್ರಶ್ನೆ ಬಂದಾಗ, ‘ಅಧಿಕಾರಕ್ಕಿಂತ ತಾನು ನಂಬಿರುವಂಥ ಸಿದ್ಧಾಂತ ದೊಡ್ಡದು’ ಎಂದು ನಂಬಿದ್ದವರು. ಅನೇಕ ಬಾರಿ ಹೋರಾಟಗಳು ಮಾಡುವಾಗ ಜೈಲು ವಾಸದಂತಹ ಪ್ರಸಂಗಗಳು ಬಂದಾಗ ಅವರು ನಮಗೆಲ್ಲಾ ನೇತೃತ್ವ ವಹಿಸಿ ಶಕ್ತಿಯನ್ನು ತುಂಬಿದ್ದರು. ನಮ್ಮ ಇಡೀ ಪಾರ್ಟಿಗೆ ಸಂಘಟನೆ ಹೇಗೆ ಇರಬೇಕು ಮತ್ತು ಸಂಘಟನಾ ಸೂತ್ರ ಹೇಗಿರಬೇಕು, ನಮ್ಮ ವೈಚಾರಿಕ ವಿಚಾರಗಳಿಗೆ ಸವಾಲುಗಳು ಬಂದಾಗ ಅದನ್ನು ನಾವು ಹೇಗೆ ಹೆದರಿಸಬೇಕು; ಸೋಲು-ಗೆಲುವುಗಳಿಗಿಂತ ನಾವು ನಂಬಿದ ಸಿದ್ಧಾಂತಕ್ಕೆ ಯಾವ ರೀತಿ ಹೆಚ್ಚು ಒತ್ತುಕೊಡಬೇಕೆಂದು ನಮಗೆಲ್ಲಾ ಮಾರ್ಗದರ್ಶನವನ್ನು ಕೊಟ್ಟಂಥವರು. ಒಟ್ಟಾರೆಯಾಗಿ ಅವರಿಗೆ ಇಡೀ ರಾಜ್ಯಕ್ಕೆ ಮಾರ್ಗದರ್ಶನ ಕೊಡತಕ್ಕಂಥ ಸಾಮರ್ಥ್ಯವಿತ್ತು. ರಾಜ್ಯವನ್ನು ಒಂದು ಒಳ್ಳೆಯ ದಿಕ್ಕಿನಲ್ಲಿ ಮುನ್ನಡೆಸುವುದಕ್ಕೆ ಎರಡು ಬಾರಿ

ಶಾಸಕರಾಗಿ ಅವರು ಕೊಟ್ಟಿರುವಂತಹ ಕೊಡುಗೆ ಅಪಾರವಾದುದು. ನಮ್ಮ ಸಂಘಟನೆಗೆ ಅವರು ಕೊಟ್ಟಿರುವಂತಹ ಮಾರ್ಗದರ್ಶನ ಇವೆಲ್ಲವನ್ನೂ ನೆನಪಿಸಿಕೊಂಡು, ಅವರ ನಿಧನದಿಂದಾಗಿ ಈ ರಾಜ್ಯ ಹಿರಿಯ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ. ನಂಬಿದ ತತ್ವಕ್ಕೆ ಮತ್ತು ಸಿದ್ಧಾಂತಕ್ಕೆ ಬದ್ಧರಾಗಿ ನಡೆದ ಮತ್ತು ನುಡಿದ ರಾಜಕಾರಣಿಯೊಬ್ಬರನ್ನು ಕಳೆಕೊಂಡಂಥ ನೋವು ನಮ್ಮೆಲ್ಲರಿಗೂ ಆಗಿದೆ ಎನ್ನುವುದನ್ನು ದಾಖಲಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕರುಣಿಸಲಿ ಎಂದು ಆ ಪರಮಾತ್ಮನಲ್ಲಿ ಬೇಡುವುದರೊಂದಿಗೆ ತಮ್ಮ ಸಂತಾಪ ಸೂಚನೆ ಪ್ರಸ್ತಾಪಕ್ಕೆ ಸಹಮತವನ್ನು ವ್ಯಕ್ತಪಡಿಸುತ್ತೇನೆ. ಧನ್ಯವಾದಗಳು.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ವಿಧಾನ ಪರಿಷತ್ತಿನ ಹಾಗೂ ವಿಧಾನ ಸಭೆಯ ಮಾಜಿ ಶಾಸಕರಾದ ಮಳ್ಳೂರ್ ಆನಂದ ರಾವ್ ರವರ ನಿಧನದ ಬಗ್ಗೆ ಸಂತಾಪ ಸೂಚನೆ ಪ್ರಸ್ತಾಪಿಸಿದ್ದಕ್ಕೆ ನಾವು ಕೂಡ ಸಹಮತ ವ್ಯಕ್ತಪಡಿಸುತ್ತಿದ್ದೇನೆ.

ಮಾಜಿ ಶಾಸಕರಾದ ಮಳ್ಳೂರ್ ಆನಂದ ರಾವ್ ರವರು ಜನಸಂಘ, ಭಾರತೀಯ ಜನತಾ ಪಾರ್ಟಿ ಇದ್ದಾಗಲೂ ಸಹ ಬೆಂಗಳೂರಿನಲ್ಲಿ ಚುನಾವಣೆ ಸಂದರ್ಭದಲ್ಲಿ ನಮಗೂ ಮತ್ತು ಅವರಿಗೂ ಒಳ್ಳೆಯ ಸಂಬಂಧವಿತ್ತು. ಬೆಂಗಳೂರಿನ ಅವಿಭಾಜ್ಯ ಸ್ಥಳವಾದ ರಾಜಾಜಿನಗರ. ಅಂದರೆ ಇವತ್ತು ಅದು ಮಹಾಲಕ್ಷ್ಮೀ ಲೇಔಟ್ ವಿಧಾನಸಭಾ ಕ್ಷೇತ್ರ ಮತ್ತು ರಾಜಾಜಿನಗರ ವಿಧಾನಸಭಾ ಕ್ಷೇತ್ರಗಳಾಗಿ ವಿಂಗಡಣೆಯಾಗಿದೆ. ಅದರಲ್ಲಿ ಅವರು ಸಕ್ರಿಯವಾಗಿ ಪಾಲ್ಗೊಂಡು ಬೆಂಗಳೂರು ನಗರದಲ್ಲಿ ಕಾಂಗ್ರೆಸ್ ಪಕ್ಷ ಎರಡ್ಮೂರು ಕ್ಷೇತ್ರದಲ್ಲಿ ಗೆಲ್ಲುವಂಥ ಸಂದರ್ಭ ಇತ್ತು. ಆಗ ರಾಜಾಜಿನಗರ ಕ್ಷೇತ್ರವು ಕಾರ್ಮಿಕರ ಕ್ಷೇತ್ರವಾಗಿಯೇ ಇತ್ತು. ಅಲ್ಲಿ ಮಾನ್ಯ ಎಂ.ಎಸ್.ಕೃಷ್ಣನ್‌ರವರು ಸಹ ಅಲ್ಲಿ ಶಾಸಕರಾಗುತ್ತಿದ್ದರು. ಮಳ್ಳೂರ್ ಆನಂದ ರಾವ್ ರವರು ಶಿಕ್ಷಕರ ಕ್ಷೇತ್ರದಿಂದ ಪಕ್ಷೇತರರಾಗಿ ಆಯ್ಕೆಯಾದ್ದರು. ಅವರಿಗೆ ಹೋಟೆಲ್ ಕಾರ್ಮಿಕರ ಜೊತೆ ಹೆಚ್ಚಿನ ಒಡನಾಟವಿತ್ತು. ಏಕೆಂದರೆ, ಮೂಲತಃ ಅವರು ಮಂಗಳೂರಿನ ಭಾಗದವರು. ಅವರು ಒಳ್ಳೆಯ ಆಕರ್ಷಕ ವ್ಯಕ್ತಿತ್ವವನ್ನು ಹೊಂದಿದ್ದರು. ಅವರು ಯಾರನ್ನು ಬೇಕಾದರು ಆಕರ್ಷಣೆ ಮಾಡುತ್ತಿದ್ದಂಥವರಾಗಿದ್ದರು. ಎಷ್ಟೇ ವಿರೋಧವಿದ್ದರೂ ಕೂಡ ಯಾವುದೇ ರೀತಿಯ ದ್ವೇಷ-ಅಸೂಯೆ ಭಾವನೆಗಳನ್ನು ಇಟ್ಟುಕೊಳ್ಳುತ್ತಿರಲಿಲ್ಲ. ಇವರ ನಿಧನ ರಾಜ್ಯಕ್ಕೆ ದೊಡ್ಡ ನಷ್ಟವಾಗಿದೆ. ತಾವು

ಮಂಡಿಸಿರುವ ಸಂತಾಪ ಸೂಚನೆಗೆ ನಾನು ಕೂಡ ಸಹಮತ ಕೋರುತ್ತಾ, ‘ಅವರ ಆತ್ಮಕ್ಕೆ ಶಾಂತಿ ಸಿಗಲಿ’ ಎಂದು ಪ್ರಾರ್ಥನೆ ಮಾಡುತ್ತೇನೆ.

**(ಮುಂದು...)**

(077)18.2.2022/10.30/ಎಂ.ಎಂ-ಜಿ.ಆರ್

(ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು:-** ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬಕ್ಕೆ ಪರಮಾತ್ಮನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ. ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ಕೋರುತ್ತೇನೆ.

**(ಮೃತರ ಗೌರವಾರ್ಥ ಸದನದಲ್ಲಿ ಉಪಸ್ಥಿತರಿದ್ದವರೆಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಿದರು)**

ಸದನದಲ್ಲಿ ಪ್ರಸ್ತಾಪಿಸಿದಂತಹ ಸಂತಾಪ ಸೂಚನೆ ನಿರ್ಣಯವನ್ನು ಮೃತರ ಕುಟುಂಬಕ್ಕೆ ಕಳುಹಿಸಿಕೊಡಲಾಗುವುದು.

**ಸಭಾಪತಿಯವರು:-** ಈಗ ಪ್ರಶ್ನೋತ್ತರ ಅವಧಿ.

**ಶ್ರೀ ಸಲೀಂ ಅಹಮದ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ದಯವಿಟ್ಟು ಮೊನ್ನೆಯಿಂದ ನಾವು ಏನು ವಿಚಾರವನ್ನು ತೆಗೆದುಕೊಂಡಿದ್ದೆವು . . .

**ಸಭಾಪತಿಯವರು:-** ಈಗ ನಾನು ನಿಮಗೊಂದು ಮಾತು ಹೇಳುತ್ತೇನೆ.

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ದಯವಿಟ್ಟು ನಮಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ.

**ಸಭಾಪತಿಯವರು:–** ಮಾನ್ಯ ಸಲೀಂ ಅಹಮದ್‌ರವರೇ, ನನ್ನ ಮಾತನ್ನು ಕೇಳಿ.

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, ಯಾವುದೇ ಕಾರಣಕ್ಕೂ ಆಗುವುದಿಲ್ಲ. ಮಾನ್ಯ ಸಚಿವರಾದ ಈಶ್ವರಪ್ಪನವರು ರಾಜೀನಾಮೆ ಕೊಡಬೇಕು, ಮುಖ್ಯಮಂತ್ರಿಯವರು ಅವರನ್ನು ಸಚಿವ ಸ್ಥಾನದಿಂದ ವಜಾ ಮಾಡಬೇಕು.

**ಸಭಾಪತಿಯವರು:–** ಮಾನ್ಯ ಸಲೀಂ ಅಹಮದ್‌ರವರೇ, ಒಂದು ನಿಮಿಷ. ಮೂರು ದಿವಸದಿಂದ ಅದನ್ನೇ ಹೇಳುತ್ತಿದ್ದೀರಿ. ಈಗ ಕುಳಿತುಕೊಳ್ಳಿ. ನಾನು ಹೇಳುತ್ತೇನೆ.

**ಶ್ರೀ ಸಲೀಂ ಅಹಮದ್:–** ಅವರ ಮೇಲೆ ದೇಶದ್ರೋಹದ ಕೇಸ್ ಇದೆ. ಈ ಸರ್ಕಾರ ಮೊಂಡ ಸರ್ಕಾರ.

**ಸಭಾಪತಿಯವರು:–** ಮಾನ್ಯ ಸಲೀಂ ಅಹಮದ್‌ರವರೇ, ಕುಳಿತುಕೊಳ್ಳಿ. ಮಾನ್ಯ ಕೆ.ಎ. ತಿಪ್ಪೇಸ್ವಾಮಿಯವರೇ ಪ್ರಶ್ನೆ ಕೇಳಿ.

(ಗೊಂದಲ)

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಲೀಂ ಅಹಮದ್‌ರವರೇ, ಮೊದಲು ನೀವು ಜಮೀರ್ ಮೇಲೆ ಕೇಸ್ ಹಾಕ್ರಿ . . .

**೦2. ಪ್ರಶ್ನೋತ್ತರ**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರುಗಳು ಸದನದ ಬಾವಿಗೆ ಬಂದರು)**

**ಚುಕ್ಕೆ ಪ್ರಶ್ನೆ ಸಂಖ್ಯೆ: 389**

**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಕೆ.ಎ. ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದೊಂದು ಮಹತ್ವವಾದ ಯೋಜನೆಯಾಗಿದೆ. ಆದರೆ ಈ ಯೋಜನೆಯಲ್ಲಿ ಕೃಷಿಕರಿಗಿಂತ ಹೆಚ್ಚಾಗಿ ಲಾಭ ಪಡೆಯುವವರು ಎಂದರೆ ಬೆಳೆ ವಿಮಾ ಕಂಪನಿಗಳು. ಮಾನ್ಯ ಸಚಿವರು ಕೊಟ್ಟಿರುವ ಉತ್ತರದ ಪ್ರಕಾರವಾಗಿ 2019-20ನೇ ಸಾಲಿನ ಕೃಷಿಕರಿಗೆ ಮಾಡಿದ ಬೆಳೆ ವಿಮೆ ಇದುವರೆಗೂ ತೀರುವಳಿಯಾಗಿಲ್ಲ.

**(ಈ ಹಂತದಲ್ಲಿ ಬಾವಿಯಲ್ಲಿದ್ದ ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರುಗಳು ಘೋಷಣೆ ಕೂಗುತ್ತಿದ್ದರು)**

ಕೇವಲ ತಾಂತ್ರಿಕ ದೋಷದಿಂದ (ಗೊಂದಲ) ಇದಕ್ಕೆ ಯಾವ ರೀತಿಯಾದ ಕ್ರಮವನ್ನು ತೆಗೆದುಕೊಂಡಿದ್ದಾರೆ ಎಂಬುದನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ರೀತಿ 2017-18ನೇ ಸಾಲಿನಲ್ಲಿ (ಗೊಂದಲ) ಬೆಳೆ ಕಂಪನಿಗಳು ಸುಮಾರು 1048 ಕೋಟಿ ರೂಪಾಯಿಗಳನ್ನು ಲಾಭ ಮಾಡಿಕೊಂಡಿವೆ. ಇದಕ್ಕೆ ಸಂಬಂಧಪಟ್ಟಂತೆ;

**(ಗೊಂದಲ)**

**(ಈ ಹಂತದಲ್ಲಿ ಬಾವಿಯಲ್ಲಿದ್ದ ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರುಗಳು ಘೋಷಣೆ ಕೂಗುತ್ತಿದ್ದರು)**

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಅವರೂ ಕೂಗುತ್ತಿದ್ದಾರೆ, ಇವರೂ ಕೂಗುತ್ತಿದ್ದಾರೆ. ನಾವು ಯಾವ ರೀತಿ . . . .

**(ಗೊಂದಲ)**

**ಶ್ರೀ ಬಿ.ಸಿ. ಪಾಟೀಲ್:-** ಮಾನ್ಯ ಸದಸ್ಯರಾದ ತಿಪ್ಪೇಸ್ವಾಮಿಯವರು ಬಹಳ ಉತ್ತಮವಾದ ರೈತರ ಬೆಳೆ ವಿಮೆ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ. 2016-17 ರಿಂದ ಇಲ್ಲಿಯವರೆಗೆ ರೈತರಿಗೆ ಪಾವತಿಯಾದ ಪ್ರೀಮಿಯಂ ಮೊತ್ತ ಒಟ್ಟು ರೂ. 1064 ಕೋಟಿ (ಗೊಂದಲ)

**ಡಾ: ವೈ.ಎ. ನಾರಾಯಣಸ್ವಾಮಿ:-** ಹಿಂದೂ ವಿರೋಧಿ ಕಾಂಗ್ರೆಸ್‌ಗೆ ಧಿಕ್ಕಾರ, ಧಿಕ್ಕಾರ. . .

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ನಿಮ್ಮ ಕಡೆಯವರಿಗೆ ಹೇಳಿ (ಗೊಂದಲ) ಎಲ್ಲರೂ ಕೂಗಾಡಿದರೆ, . . . . (ಗೊಂದಲ)

**ಶ್ರೀ ಬಿ.ಸಿ. ಪಾಟೀಲ್:-** (ಗೊಂದಲ) ಸುಮಾರು 552.62 ಕೋಟಿ (ಗೊಂದಲ) ಪ್ರಸ್ತಾವನೆಗಳಲ್ಲಿ N.C.I.P., …. (ಗೊಂದಲ)

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ನಿಮ್ಮ ಜನರಿಗೆ ಕುಳಿತುಕೊಳ್ಳುವುದಕ್ಕೆ ಹೇಳಿ.

**ಶ್ರೀ ಬಿ.ಸಿ. ಪಾಟೀಲ್:-** (ಗೊಂದಲ)

**ಶ್ರೀ ಸಲೀಂ ಅಹಮದ್ (ಸ್ವಸ್ಥಾನದಿಂದ):-** ಮಾನ್ಯ ಸಭಾಪತಿಯವರೇ, ದಯವಿಟ್ಟು ಕೇಳಬೇಕು. The House is not in order. ನೀವು ಪ್ರಶ್ನೋತ್ತರ ನಡೆಸುವುದು ಸರಿಯಲ್ಲ. ದಯವಿಟ್ಟು ತಾವು ಪ್ರಶ್ನೋತ್ತರವನ್ನು ನಿಲ್ಲಿಸಬೇಕು.

(ಗೊಂದಲ)

**ಸಭಾಪತಿಯವರು:-** ಸದನವನ್ನು ನಡೆಸಬೇಕೋ, ನಡೆಸಬಾರದೋ?

(ಗೊಂದಲ)

**(ಈ ಹಂತದಲ್ಲಿ ಆಡಳಿತ ಪಕ್ಷದ ಮಾನ್ಯ ಸದಸ್ಯರು XXX ಎಂದು ಘೋಷಣೆ ಕೂಗುತ್ತಿದ್ದರು)**

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

**ಶ್ರೀ ಬಿ.ಸಿ. ಪಾಟೀಲ್:–** ಇದು ತೋಟಗಾರಿಕೆ ಇಲಾಖೆಗೆ ಬರುತ್ತದೆ. ಅವರ ಜೊತೆ ಚರ್ಚೆ ಮಾಡಿ, . . . (ಗೊಂದಲ)

**(ಈ ಹಂತದಲ್ಲಿ ಆಡಳಿತ ಪಕ್ಷದ ಮಾನ್ಯ ಸದಸ್ಯರುಗಳು 'ಜೈ ಶ್ರೀರಾಮ್' ಎಂದು ಘೋಷಣೆ ಕೂಗುತ್ತಿದ್ದರು)**

(ಗೊಂದಲ)

**ಸಭಾಪತಿಯವರು:–** ಒಂದು ನಿಮಿಷ, ದಯವಿಟ್ಟು ಎಲ್ಲರೂ ಇಲ್ಲಿ ಕೇಳಿ. ಮಾನ್ಯ ಸಭಾನಾಯಕರೇ, ಮಾನ್ಯ ವಿರೋಧ ಪಕ್ಷದ ನಾಯಕರೇ ಒಂದು ನಿಮಿಷ (ಗೊಂದಲ) ಎರಡರಲ್ಲಿ ಒಂದು ಮಾತನಾಡಿ. **XXX**

(ಗೊಂದಲ)

**ಸಭಾಪತಿಯವರು:–** ಈಗ ಸದನವನ್ನು 10 ನಿಮಿಷಗಳ ಕಾಲ ಮುಂದೂಡಲಾಗಿದೆ.

**(ಸದನವನ್ನು ಬೆಳಗ್ಗೆ 10 ಗಂಟೆ 36 ನಿಮಿಷದಿಂದ 10 ನಿಮಿಷಗಳ ಕಾಲ ಮುಂದೂಡಲಾಯಿತು)**

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

(078) 18-02-2022 11.10 ಡಿಎಸ್-ಎಕೆ **(ಸಭಾಪತಿಯವರು ಪೀಠವನ್ನಲಂಕರಿಸಿದರು)**

**(ಮತ್ತೆ ಸದನವು 11 ಗಂಟೆ 14 ನಿಮಿಷಕ್ಕೆ ಪ್ರಾರಂಭವಾಯಿತು)**

**(ಸದನ ಪ್ರಾರಂಭವಾಗುತ್ತಿದ್ದಂತೆ ಕಾಂಗ್ರೆಸ್ ಪಕ್ಷದ ಸದಸ್ಯರೆಲ್ಲರೂ ಭಿತ್ತಿ ಪತ್ರಗಳನ್ನು ಹಿಡಿದು ಬಾವಿಯಲ್ಲಿ ಧರಣಿ ನಿರತರಾಗಿ ಸರ್ಕಾದ ವಿರುದ್ಧ ಘೋಷಣೆಯನ್ನು ಕೂಗತೊಡಗಿದರು)**

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಐದು ನಿಮಿಷ ತಮ್ಮ ಸದಸ್ಯರುಗಳನ್ನು ತಮ್ಮ ಸ್ಥಾನಗಳಲ್ಲಿ ಕುಳಿತುಕೊಳ್ಳುವುದಕ್ಕೆ ಹೇಳಿ.

**ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಸರ್ಕಾರದ ಹೇಳಿಕೆಗೆ ನಮ್ಮ ಸಹಮತವಿಲ್ಲ ಎಂದು ನಾವು ಮೊನ್ನೆಯಿಂದ ತಮ್ಮಲ್ಲಿ ಮನವಿ ಮಾಡುತ್ತಿದ್ದೇವೆ. ಮಂತ್ರಿಗಳ ಮೇಲೆ ರಾಷ್ಟ್ರ ದ್ರೋಹದ ಪ್ರಕರಣವನ್ನು ದಾಖಲು ಮಾಡಬೇಕಾಗಿತ್ತು ಅದನ್ನು ಸರ್ಕಾರ ಇನ್ನು ಮಾಡಿಲ್ಲ. ಆದ್ದರಿಂದ ಸರ್ಕಾರದಿಂದ ನಮಗೆ ಭರವಸೆ ಸಿಗುವವರೆಗೂ ಈ ಪ್ರತಿಭಟನೆಯನ್ನು ಮುಂದುವರೆಸುತ್ತೇವೆ.

**ಡಾ॥ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ಸದಸ್ಯರುಗಳು ಪ್ರತಿಭಟನೆ ಮಾಡುವುದಕ್ಕೆ ಅಭ್ಯಂತರವೇನು ಇಲ್ಲ. ಆದರೆ ಈ ದೇಶದಲ್ಲಿ ಸಂವಿಧಾನ ಬಹಳ ಮುಖ್ಯ. ನಾವೆಲ್ಲಾ ಸಂವಿಧಾನದ ಅಡಿಯಲ್ಲಿ ಕೆಲಸ ಮಾಡುತ್ತಿದ್ದೇವೆ. ಸಂವಿಧಾನದ ಅಡಿಯಲ್ಲಿ ಈ ದೇಶದ **XXX** ಕೆಲಸ ಮಾಡುತ್ತಿರುವ **XXX** ವಿರುದ್ಧ, **XXX** ವಿರುದ್ಧ ಮಾನ್ಯ ಸಲೀಂ ಅಹಮದ್‌ರವರು ಅವರ ಸ್ಥಾನದಲ್ಲಿ ನಿಂತುಕೊಂಡು ದಿಕ್ಕಾರ ಎಂದು ಕೂಗಿದ್ದಾರೆ. ಇದು ಸಂವಿಧಾನಕ್ಕೆ ಮಾಡಿರುವ ಅಪಚಾರ. ಅವರ ಮೇಲೆ ದೇಶದ್ರೋಹದ ಕೇಸ್ ಹಾಕಬೇಕು. ಅವರನ್ನು ಸದನದಿಂದ ಆಚೆ ಹಾಕಬೇಕೆಂದು ನಾನು ಆಗ್ರಹ ಮಾಡುತ್ತಿದ್ದೇನೆ.

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, **XXX** ಆದರೆ ನಾವು ಈಗೇನು ವಿಷಯವನ್ನು ಚರ್ಚೆ ಮಾಡುತ್ತಿದ್ದೇವೆ ಅದನ್ನು ನಾವು ಸಂವಿಧಾನ ವಿರೋಧಿ ಎಂದು ಹೇಳುತ್ತಿರುವುದು. **XXX**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಈ ದೇಶದ **XXX**

**ಶ್ರೀ ಬಿ.ಕೆ.ಹರಿಪ್ರಸಾದ್:– XXX**

(ಗೊಂದಲ)

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರುಗಳು ಕಾಂಗ್ರೆಸ್ ಪಕ್ಷದ ವಿರುದ್ಧ ಘೋಷಣೆ ಕೂಗತೊಡಗಿದರು)**

**ಡಾ॥ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, **XXX**

(ಗೊಂದಲ)

**ಡಾ॥ವೈ.ಎ.ನಾರಾಯಣಸ್ವಾಮಿ:–** ಈ ದೇಶದ **XXX**

**(ಈ ಹಂತದಲ್ಲಿ ಸಭಾಪತಿಯವರು ಪೀಠದಿಂದ ಎದ್ದು ನಿಂತರು)**

**ಸಭಾಪತಿಯವರು:–** ಎಲ್ಲರೂ ಒಂದು ನಿಮಿಷ ಕುಳಿತುಕೊಳ್ಳಿ.

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಬಾವಿಯಿಂದ ತೆರಳಿ ತಮ್ಮ ತಮ್ಮ ಸ್ಥಾನದಲ್ಲಿ ಕುಳಿತುಕೊಂಡರು)**

**ಸಭಾಪತಿಯವರು:–** ಎಲ್ಲಾ ಸದಸ್ಯರುಗಳಗೂ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ಸದನವನ್ನು ಸದುದ್ದೇಶದಿಂದ ಚೆನ್ನಾಗಿ ನಡೆಸಬೇಕೆಂದು ನಾವೆಲ್ಲರೂ ಇದ್ದರು ಕೂಡ ಪರಿಸ್ಥಿತಿಯ ಒತ್ತಡಕ್ಕೆ ಸ್ವಲ್ಪ ಹೆಚ್ಚು ಕಡಿಮೆಯಾದರೂ ಕೂಡ ನಾನು ಎಲ್ಲಾ ಸದಸ್ಯರುಗಳಿಗೆ ಹೇಳುವುದೇನೆಂದರೆ,

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

---

**XXX**. ಆ ಹಿನ್ನಲೆಯಲ್ಲಿ ತಮಗೆಲ್ಲರಿಗೂ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ಸದನವನ್ನು ನಾವೆಲ್ಲರೂ ಸೇರಿ ನಡೆಸಬೇಕೆಂದು ನಾನು ಬಹಳಷ್ಟು ಮನಸ್ಸಿನಲ್ಲಿದ್ದಂತಹ ಭಾವನೆಗಳನ್ನು ವ್ಯಕ್ತಪಡಿಸಿದ್ದೇನೆ. ಇವತ್ತು ನಾನು ತಮಗೆಲ್ಲರಿಗೂ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ವಿರೋಧ ಪಕ್ಷದವರಿಗೆ ಧರಣಿ ಮಾಡುವ ಹಕ್ಕು ಇದೆ, ಆದ್ದರಿಂದ ಅವರು ಧರಣಿ ಮಾಡುತ್ತಿದ್ದಾರೆ. ಆಡಳಿತ ಪಕ್ಷದವರು ಸದನವನ್ನು ಹೇಗೆ ನಡೆಸಬೇಕೆಂದು ನಮಗೆ ಸಲಹೆಯನ್ನು ಕೊಡಬೇಕು. ಈ ಸದನದಲ್ಲಿ ಇಲ್ಲದವರ ಬಗ್ಗೆ ಆ ಕಡೆ ಇರಲಿ, ಈ ಕಡೆ ಇರಲಿ ಮಾತನಾಡುವುದು ಒಳ್ಳೆಯದಲ್ಲ. **XXX** ಈ ಹಿನ್ನಲೆಯಲ್ಲಿ ನಾನು ಹೇಳುವುದೇನೆಂದರೆ, ನಾವು ಉತ್ತಮವಾದ ಪರಂಪರೆಯನ್ನು ಹಾಕಿಕೊಂಡು ಹೋಗುವುದಕ್ಕೆ ಎರಡು ಕಡೆಯಿಂದ ತಮ್ಮ ಸಹಕಾರವನ್ನು ಕೇಳುತ್ತೇನೆ. ನನ್ನ ಮನಸ್ಸಿಗೆ ಬಹಳಷ್ಟು ನೋವಾಗಿದೆ.

(79) 18-2-2022/11-20/bkp-rn

**ಸಭಾಪತಿಯವರು** (ಮುಂದು):

ನಮ್ಮ ಮನಸ್ಸಿಗೆ ಬಹಳಷ್ಟು ನೋವು ಆಗಿದೆ. ಏಕೆಂದರೆ, ಈ ಸದನ ಇದೇ ರೀತಿ ನಡೆದರೆ ಮತ್ತೆ ನಾವು ಯಾವ ರೀತಿ ಹೋಗಬೇಕು. ಆ ಹಿನ್ನೆಲೆಯಲ್ಲಿ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. **XXX** **ಎರಡೂ ಕಡೆಯಿಂದ ಹೇಳಿರುವುದನ್ನು ಕಡತದಿಂದ ತೆಗೆದು ಹಾಕಬೇಕು.**

ಮತ್ತೆ ನಾನು ದಿನಾಂಕ 18-2-2022ರಂದು ಸಮೂಹ-4ರ ಸದನದಲ್ಲಿ ಉತ್ತರಿಸುವ ಒಟ್ಟು 15 ಪ್ರಶ್ನೆಗಳ ಪೈಕಿ ಕೆಲವು ಪ್ರಶ್ನೆಗಳಿಗೆ ಉತ್ತರ ಬಂದಿದ್ದು, ಕೆಲವು ಪ್ರಶ್ನೆಗಳಿಗೆ ಬಂದಿರುವುದಿಲ್ಲ. ಆ ಹಿನ್ನೆಲೆಯಲ್ಲಿ ಇವತ್ತಿನ ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಂದಿರುವ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತೇನೆ. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಬಗ್ಗೆ ಮಾನ್ಯ ಸಭಾ ನಾಯಕರು ಉತ್ತರಗಳನ್ನು ಮಂಡಿಸುತ್ತಾರೆ.

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

**ಆ) ಚುಕ್ಕೆ ಗುರುತಿನ ಹಾಗೂ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳ ಮಂಡನೆ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ( ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ದಿನಾಂಕ 18-2-2022ರಂದು ಸಮೂಹ-4ರ ಸದನದಲ್ಲಿ ಉತ್ತರಿಸುವ ಒಟ್ಟು 15 ಪ್ರಶ್ನೆಗಳ ಪೈಕಿ 13 ಪ್ರಶ್ನೆಗಳಿಗೆ ಹಾಗೂ ಲಿಖಿತ ಮೂಲಕ ಉತ್ತರಿಸುವ ಒಟ್ಟು 119 ಪ್ರಶ್ನೆಗಳ ಪೈಕಿ 20 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**೦೩. ನಿಯಮ ೫೯ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ**

**ವಿಷಯ:- ರಾಷ್ಟ್ರಧ್ವಜಕ್ಕೆ ಸಚಿವರೊಬ್ಬರು ಅಗೌರವ ತೋರಿಸಿದ್ದಾರೆನ್ನುವ ಬಗ್ಗೆ.**

**ಶ್ರೀ ಪ್ರಕಾಶ್ ಕೆ. ರಾಥೋಡ್( ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ನಮಗೆ ಹೇಳಿದ್ದೀರಿ. ಈ ಸದನವನ್ನು ನಡೆಸಬೇಕು, ಸದನದಲ್ಲಿ ಇಲ್ಲದೇ ಇರುವವರ ಹೆಸರನ್ನು ಪ್ರಸ್ತಾಪ ಮಾಡಬಾರದು, ಅದನ್ನು ನಾವು ಒಪ್ಪುತ್ತೇವೆ. ಆದರೆ, ಇದನ್ನು ಪ್ರಾರಂಭ ಮಾಡಿದ್ದು ನಾವು ಅಲ್ಲ. ಈ ವಿಚಾರದಲ್ಲಿ ತಾವು ಸರಿಯಾಗಿ ಹೇಳಿದ್ದೀರಿ. ಆಡಳಿತ ಪಕ್ಷದವರ ಜವಾಬ್ದಾರಿ ಇದು. ನಾವು ವಿರೋಧ ಪಕ್ಷದಲ್ಲಿದ್ದು, ನಾವು ಪ್ರತಿಭಟನೆ ಮಾಡುವುದು, ಆ ಮೂಲಕ ವಿಚಾರವನ್ನು ಸರ್ಕಾರದ ಗಮನಕ್ಕೆ ತರುವುದು ನಮ್ಮ ಹಕ್ಕು ಆಗಿದ್ದು, ಈ ಕೆಲಸವನ್ನು ನಾವು ಇಲ್ಲಿ ಮಾಡುತ್ತಿದ್ದೇವೆ. ನಾವು ಯಾರೂ ಸಹ ಮೊದಲನೆಯದಾಗಿ, ಈ ಸದನದಲ್ಲಿ ಇಲ್ಲದೇ ಇರುವವರ ಹೆಸರನ್ನು ತೆಗೆದುಕೊಂಡಿರುವುದಿಲ್ಲ. ನಾವು ಮಾಡುತ್ತಿರುವುದು ಪ್ರತಿಭಟನೆ. ನಮ್ಮ ರಾಷ್ಟ್ರಧ್ವಜಕ್ಕೆ ಅಪಮಾನವಾಗಿದೆ, ಸಂವಿಧಾನಕ್ಕೆ ಅಪಚಾರವಾಗಿದೆ, ಮಾನ್ಯ ಸಚಿವರಾದ ಶ್ರೀ ಕೆ.ಎಸ್. ಈಶ್ವರಪ್ಪನವರು ರಾಜೀನಾಮೆಯನ್ನು ಕೊಡಬೇಕು.

(ಗೊಂದಲ)

**ಸಭಾಪತಿಯವರು:-** ನಾನು ಶ್ರೀಯುತ ಪ್ರಕಾಶ್ ರಾಥೋಡ್ ರವರಿಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದೇನೆ. ಅವರು short ಆಗಿ ಮಾತನಾಡಬೇಕು.

(ಗೊಂದಲ)

**ಶ್ರೀ ಸಲೀಂ ಅಹಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ನನ್ನ ಬಗ್ಗೆ ಮಾತನಾಡಿದ್ದಾರೆ. ಈಗ ನಾವು ಯಾರ ಬಗ್ಗೆಯೂ ಹೇಳಿರಲಿಲ್ಲ. ಶ್ರೀಯುತ ನಾರಾಯಣಸ್ವಾಮಿಯವರು ನನ್ನ ಮೇಲೆ ಮತ್ತು **XXX** ರವರ ವಿರುದ್ಧ ಈ ರೀತಿಯಲ್ಲಿ charge ಮಾಡಿ ಹೇಳಿರುವುದು ಸರಿಯೇ?

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

**ಸಭಾಪತಿಯವರು:–** ನಾನು ನಿಮಗೆ ಹೇಳಿದ್ದೇನೆ. ಎರಡೂ ಕಡೆ **XXX** ಕೆಲವು ವಿಷಯಗಳು ಎಂದರೆ, **XXX** ಈ ರೀತಿಯ ವಿಚಾರಗಳು, ಆ ರೀತಿಯ ವಿಚಾರಗಳ ಬಗ್ಗೆ ಮಾತನಾಡುವುದು ಇರುತ್ತದೆ. **XXX**

**ಶ್ರೀ ಸಲೀಂ ಅಹಮದ್:–** ಅವರಿಗೆ ನಾಚಿಕೆಯಾಗಬೇಕು.

**ಡಾ॥ ವೈ.ಎ. ನಾರಾಯಣಸ್ವಾಮಿ:–** ನಾಚಿಕೆ ನಿಮಗೆ ಆಗಬೇಕು.

**ಶ್ರೀ ಸಲೀಂ ಅಹಮದ್:–** ಕೆ.ಪಿ.ಸಿ.ಸಿ. ಅಧ್ಯಕ್ಷರ ಬಗ್ಗೆ ಹೇಳಿದರೆ ಸುಮ್ಮನೆ ಕುಳಿತುಕೊಳ್ಳಲಿಕ್ಕೆ ಆಗುತ್ತದೆಯೇ?

(ಗೊಂದಲ)

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೆ, ಸಚಿವರು ರಾಜಿನಾಮೆಯನ್ನು ಕೊಡಬೇಕು. ನಮ್ಮ ಹೋರಾಟವನ್ನು ನಾವು ಮಾಡುತ್ತಿದ್ದೇವೆ.

(ಗೊಂದಲ)

**ಡಾ॥ ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ...

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೆ, ಸದನದಲ್ಲಿ ತಾವು ಹೇಳುತ್ತಿರುವುದನ್ನು ನಾವು ಕೇಳಿದ್ದೇವೆ. ಸದನದಲ್ಲಿ ಇಲ್ಲದೇ ಇರುವವರ ಹೆಸರನ್ನು ತೆಗದುಕೊಳ್ಳಬಾರದು ಎಂದು ಹೇಳಿದ್ದೀರಿ. ನಾವು ಅದಕ್ಕೆ ಒಪ್ಪುತ್ತಿದ್ದೇವೆ. ಆದರೆ, ನಮ್ಮ ವಾದ ಏನಿದೆ, ಅದನ್ನು ನಾವು ಮಂಡನೆ ಮಾಡುತ್ತೇವೆ. ಪ್ರತಿಪಕ್ಷದವರಾದ ನಮಗೆ ಆ ಒಂದು ಹಕ್ಕು ಇದೆ. ಇದರ ಬಗ್ಗೆ ಸರ್ಕಾರದ ಗಮನಸೆಳೆಯಬೇಕು. ಸರ್ಕಾರವನ್ನು ಸರಿಯಾದ ದಾರಿಯಲ್ಲಿ ನಡೆಸಬೇಕು. ನಮ್ಮ ರಾಷ್ಟ್ರಧ್ವಜಕ್ಕಾಗಲಿ, ರಾಷ್ಟ್ರಗೀತೆಗಾಗಲಿ ಅಪಮಾನವಾದಾಗ

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

---

ಬೇರೆಯವರ ಮೇಲೆ ಹೇಗೆ ಕೇಸ್‌ಗಳನ್ನು ಮಾಡಿದ್ದಾರೆ, ಅದೇ ರೀತಿಯಲ್ಲಿ ಎಲ್ಲರ ಮೇಲೂ ಕೇಸ್ ದಾಖಲು ಮಾಡಬೇಕು. ಇದರ ಬಗ್ಗೆ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇವೆ. ಆದರೆ, ಇದಕ್ಕೆ ಸರ್ಕಾರ ಸ್ಪಂದಿಸುತ್ತಿಲ್ಲ. ಅದಕ್ಕೆ ನಾವು ಪ್ರತಿಭಟನೆ ಮಾಡುತ್ತಿದ್ದೇವೆ. ಸಭಾನಾಯಕರು ಗಮನಿಸಬೇಕು. ಇದಕ್ಕೆ ನಮಗೆ ಹಕ್ಕು ಇದೆ. ಇದರ ಬಗ್ಗೆ ಧರಣಿಯನ್ನು ಮಾಡಿಯೇ ಮಾಡುತ್ತೇವೆ. ಅವರ ಮೇಲೆ sedition case ಹಾಕಬೇಕು.

**ಡಾ॥ ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, they cannot dictate us. It is not their duty.

**ಸಭಾಪತಿಯವರು:–** ತಾವು ಸಾಕಷ್ಟು ಮಾತನಾಡಿದ್ದೀರಿ. ಇನ್ನು ತಾವು ಎಷ್ಟು ಹೊತ್ತು ಮಾತನಾಡುತ್ತೀರಿ.

(ಗೊಂದಲ)

**ಶ್ರೀ ಎಂ.ಕೆ. ಪ್ರಾಣೇಶ್ :– ಮಾನ್ಯ ಸಭಾಪತಿಯವರೆ,** ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು ಅವರು ಮಾತನಾಡುವಾಗ ಈ ವಿಚಾರವನ್ನು ತಮ್ಮ ಗಮನಕ್ಕೆ ತಂದರು. ನೀವು ಆಗ ಪೀಠದಿಂದ ಒಂದು ಆದೇಶವನ್ನು ಕೊಟ್ಟಿದ್ದೀರಿ.

**ಶ್ರೀ ಪ್ರಕಾಶ್ ಕೆ. ರಾಥೋಡ್( ನಾಮ ನಿರ್ದೇಶಿತರ):–** ಅವರು ಹೇಳಿದ್ದನ್ನು ವಾಪಸ್ಸು ತೆಗೆದುಕೊಳ್ಳಿ. ಇಲ್ಲವೆಂದರೆ ನೀವು ಮಾಡಿ. ತಾಕತ್ತು ಇದ್ದರೆ ಮಾಡಿ

**ಶ್ರೀ ವೈ.ಎ. ನಾರಾಯಣಸ್ವಾಮಿ:–** ತಾವು ಏನು ಮಾತನಾಡುತ್ತಿದ್ದೀರಿ. **XXX**

(ಗೊಂದಲ)

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮ ನಿರ್ದೇಶಿತರು) :-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾ ನಾಯಕರು ನಮ್ಮ ಸದಸ್ಯರಿಗೆ threat ಕೊಡುತ್ತಿದ್ದಾರೆ. ಈ ಬಗ್ಗೆ ಮಾನ್ಯ ಸಭಾಪತಿಯವರು ಹೇಳಬೇಕು.

**ಸಭಾಪತಿಯವರು:-** ತಾವು ಕುಳಿತುಕೊಳ್ಳಿ, ನೀವು ನನ್ನ ಮಾತು ಕೇಳುತ್ತಿರೋ ಇಲ್ಲವೋ? ಏನು ತಾವು ಹುಡುಗಾಟಿಕೆ ಮಾಡುತ್ತಿದ್ದೀರಾ? ಮಾನ್ಯ ವಿರೋಧ ಪಕ್ಷದ ನಾಯಕರು ಅವರಿಗೆ ಹೇಳಬೇಕು. ಒಂದು ನಿಮಿಷ. ಕುಳಿತುಕೊಳ್ಳಿ. ನಾನು ಏನು ಹೇಳಿದೆ ಎಂದರೆ **ಈ ಸದನದಲ್ಲಿ ಇಲ್ಲದೇ ಇರುವವರ ಹೆಸರನ್ನು ತೆಗೆಯಬಾರದು ಎಂದು ಹೇಳಿದೆ. ಇದು ಒಂದು ವಿಷಯ. ಎರಡನೆಯದಾಗಿ, ಎಲ್ಲವನ್ನು ಕಡತದಿಂದ ತೆಗೆದು ಹಾಕಲಾಗಿದೆ. ಮತ್ತೆ ಏತಕ್ಕೆ ಮಾತನಾಡುತ್ತೀರಿ? ಕಡತದಿಂದ ತೆಗೆದು ಹಾಕಿದ ಮೇಲೆ ಮುಗಿಯಿತು.**

**೦4. ವರದಿಗಳನ್ನೊಪ್ಪಿಸುವುದು**

**(ಅ) ಶ್ರೀ. ಎನ್. ರವಿಕುಮಾರ್(ಸದಸ್ಯರು, ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿ):-** ಮಾನ್ಯ ಸಭಾಪತಿಯವರೆ, ಕರ್ನಾಟಕ ವಿಧಾನ ಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ 2021-22 ನೇ ಸಾಲಿನ ಸಮಿತಿ ಸದಸ್ಯನಾದ ನಾನು ಸಮಿತಿಯು 2018ನೇ ಸಾಲಿನಲ್ಲಿ ಸಿ.ಎ.ಜಿ.ಯವರು ನೀಡಿರುವ ವಾರ್ಷಿಕ ತಾಂತ್ರಿಕ ಪರಿಶೀಲನಾ ವರದಿಯ ಕಂಡಿಕೆಗಳ ಮೇಲೆ ಮತ್ತು ಸಮಿತಿಯ ಮಾನ್ಯ ಸದಸ್ಯರು ನೀಡಿರುವ ಮನವಿಯ ಅಂಶಗಳನ್ನು ಪರಿಶೀಲಿಸಿ, ಸಿದ್ಧಪಡಿಸಿರುವ ಸಮಿತಿಯ 35ನೇ ವರದಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**(ಆ) ಶ್ರೀ ಆಯನೂರು ಮಂಜುನಾಥ್, (ಅಧ್ಯಕ್ಷರು, ಸದಸ್ಯರುಗಳ ಖಾಸಗಿ ವಿಧೇಯಕಗಳ ಕಮತ್ತು ನಿರ್ಣಯಗಳ ಸಮಿತಿ):-** ಮಾನ್ಯ ಸಭಾಪತಿಯವರೆ, ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರುಗಳ ಖಾಸಗಿ ವಿಧೇಯಕಗಳ ಮತ್ತು ನಿರ್ಣಯಗಳ ಸಮಿತಿ ಅಧ್ಯಕ್ಷನಾದ ನಾನು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮ 215 ರ ಮೇರೆಗೆ ಸಮಿತಿಯ ಮೊದಲನೇ ವರದಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**ಸಭಾಪತಿಯವರು:-** ವರದಿಗಳನ್ನೊಪ್ಪಿಸಲಾಯಿತು.

**(ಗೊಂದಲ)**

**೦5. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ**

**ವಿಷಯ: ರಾಷ್ಟ್ರಧ್ವಜಕ್ಕೆ ಸಚಿವರೊಬ್ಬರು ಅಗೌರವ ತೋರಿಸಿದ್ದಾರೆನ್ನುವ ಬಗ್ಗೆ.**

**ಶ್ರೀ ಎಂ.ಕೆ. ಪ್ರಾಣೇಶ್ :-** ಮಾನ್ಯ ಸಭಾಪತಿಯವರೆ, ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಇಲ್ಲಿ ಕುಳಿತಂತಹ ಸಂದರ್ಭದಲ್ಲಿ ವಿಚಾರವನ್ನು ತಮ್ಮ ಮುಂದೆ ಮಂಡಿಸಿದ್ದಾರೆ. ಸದನದಲ್ಲಿ ಯಾವುದನ್ನು ತೆಗೆದುಕೊಳ್ಳಬೇಕು, ಯಾವುದನ್ನು ತೆಗೆದುಕೊಳ್ಳಬಾರದು ಎನ್ನುವ ವಿಚಾರವನ್ನು ಸಭಾಪತಿಯವರ ಪೀಠಕ್ಕೆ ಬಿಡಲಾಗಿದೆ. ತಾವು ಸಹ ಈ ಬಗ್ಗೆ ನಿರ್ಣಯವನ್ನು ಮಾಡಿದ್ದೀರಿ. ನಿರ್ಣಯವನ್ನು ಮಾಡಿದಂತಹ ಸಂದರ್ಭದಲ್ಲಿ ಇದನ್ನು ತಾವು ರಿಜೆಕ್ಟ್ ಮಾಡಿದ್ದೀರಿ. ಮಾಡಿದಂತಹ ಸಂದರ್ಭದಲ್ಲಿ ತಮ್ಮ ಪೀಠಕ್ಕೆ ಅಗೌರವವನ್ನು ತೋರಿಸಿ ಮತ್ತೆ ಇದನ್ನು ಪ್ರಸ್ತಾಪ ಮಾಡಲಿಕ್ಕೆ ವಿರೋಧ ಪಕ್ಷದವರು ಪ್ರಾರಂಭ ಮಾಡಿದ್ದಾರೆ. ಆದ್ದರಿಂದ, ಇದಕ್ಕೆ ತಾವು allow ಮಾಡಬಾರದು ಎನ್ನುವುದು ನನ್ನ ವಿನಂತಿ. ಈ ರೀತಿ ಮಾಡಿದರೆ ಪೀಠದ ಗೌರವ ಎಲ್ಲಿ ಉಳಿಯುತ್ತದೆ? ಹೊಸಬರು ವಿಧಾನ ಪರಿಷತ್ತಿಗೆ ಆಯ್ಕೆಯಾಗಿ ಬಂದಿದ್ದಾರೆ. ಅವರಿಗೆ ಈ ಪೀಠದ ಬಗ್ಗೆ ವಿಶೇಷ ಗೌರವ ಮತ್ತು ಕಾಳಜಿ ಇದೆ. ಅವರು ಕೂಡ ನಾಳೆ, ಪೀಠದಿಂದ ಮಾಡಿದಂತಹ ಆದೇಶವನ್ನು ನಾವು

ದಿಕ್ಕರಿಸಬಹುದು ಎನ್ನುವ ಮನಸ್ಥಿತಿಗೆ ಅವರು ಬರುತ್ತಾರೆ. ಹೀಗಾಗಿ, ದಯಮಾಡಿ, ಇದಕ್ಕೆ ತಾವು ಅವಕಾಶ ಮಾಡಬಾರದು. ತಾವು ಏನು ನಿರ್ಣಯವನ್ನು, ಆದೇಶವನ್ನು ಮಾಡುತ್ತೀರಿ, ಅದು ಕಾರ್ಯಗತವಾಗಬೇಕು. You are the Supreme. ಹೀಗಾಗಿ, ಅದಕ್ಕೂ ಅವಕಾಶವನ್ನು ಕೊಡುತ್ತಾರೆ ಎಂದಾಗ ತಾವು ಸದನದಿಂದ ನಿರ್ಣಯ ಮಾಡಿ, ಅವರನ್ನು ತಾವು ಕಾನೂನಿನ ಚೌಕಟ್ಟಿನಲ್ಲಿ ಮಾಡಬೇಕು, ಅವರನ್ನು ಹೊರಗಡೆ ಹಾಕಬೇಕು ಅಥವಾ ಕುಳಿತುಕೊಳ್ಳಲಿಕ್ಕೆ ಹೇಳಬೇಕು. ಹೀಗಾಗಿ ಸದನವನ್ನು ನಡೆಸುವಂತಹದ್ದು, ಸಾಕಷ್ಟು ಸಮಸ್ಯೆಗಳು ನಿರ್ಮಾಣವಾಗಿವೆ. ಯಾವುದೇ ಆರ್ಥಿಕ ಪರಿಸ್ಥಿತಿಯೊಳಗಡೆ ಸಾಮಾನ್ಯ ಮನುಷ್ಯ ಕೂಡ ಸಂಕಷ್ಟ ಪರಿಸ್ಥಿತಿಯಲ್ಲಿದ್ದಾನೆ. ಅದನ್ನು ನಾವು ಪರಿಹಾರ ಮಾಡಬೇಕೇ ಅಥವಾ ಇಂತಹ ವಿಚಾರಗಳನ್ನು ಇಟ್ಟುಕೊಂಡು ಚರ್ಚೆ ಮಾಡಬೇಕಾ? ಇದು ಇವರಿಗೆ ಬೇಕಾಗಿಲ್ಲ. ಕೇವಲ ರಾಜಕಾರಣ ಮಾಡುವುದನ್ನು ದೃಷ್ಟಿಯಲ್ಲಿಟ್ಟುಕೊಂಡಿದ್ದಾರೆ.

**ಮುಂದು**

**(೮೦) 18.02.2022 11.30 ಎಸ್‌ವಿ-ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಂ.ಕೆ.ಪ್ರಾಣೇಶ್ (ಮುಂದು):-**

ದಯಮಾಡಿ ತಾವು ಕೊಟ್ಟಿರುವ ಆದೇಶವನ್ನು ಎತ್ತಿ ಹಿಡಿಯಬೇಕು. ಅವರಿಗೆ ಈ ವಿಚಾರದಲ್ಲಿ ಯಾವುದೇ ಚರ್ಚೆಯನ್ನು ಮಾಡಲಿಕ್ಕೆ ಅವಕಾಶವನ್ನು ಕೊಡಬಾರದು ಎಂದು ನಾನು ವಿನಂತಿಯನ್ನು ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಪ್ರಾಣೇಶ್ ಅವರೇ, ತಾವು ಹೇಳಿದುದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಇನ್ನು ಮುಂದೆ ಈ ರೀತಿಯ ಘಟನೆಯಾದರೆ ನಾನು ಯಾವುದೇ ರೀತಿಯ ಕಠಿಣ ನಿರ್ಧಾರವನ್ನು ತೆಗೆದುಕೊಳ್ಳುತ್ತೇನೆ. ಸದನವನ್ನು ಸೋಮವಾರ ಬೆಳಗ್ಗೆ 11 ಗಂಟೆಯವರೆವಿಗೆ ಮುಂದೂಡಲಾಗಿದೆ ಎಂದು ಬಹಳ ನೋವಿನಿಂದ ಹೇಳುತ್ತಿದ್ದೇನೆ.

(ಸದನವು ಬೆಳಗ್ಗೆ 11 ಗಂಟೆ 30 ನಿಮಿಷಗಳಿಗೆ ಮುಂದೂಡಲ್ಪಟ್ಟು ಪುನಃ ಸೋಮವಾರ, ದಿನಾಂಕ 21.02.2022ರಂದು ಬೆಳಗ್ಗೆ 11 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

<><><>